# ಪದ್ಯಪಲ್ಲವ

ಲಂಕೇಶರ 'ಅವ್ವ' ಕವನವು ಓದುಗರ, ವಿಮರ್ಶಕರ ಮೆಚ್ಚುಗೆಯನ್ನು ಪಡೆದಿದೆ. ಕುವೆಂಪು ಅವರ 'ಮನೆಮನೆಯ ತಪಸ್ವಿನಿಗೆ' ಕವಿತೆಯಲ್ಲಿ, 'ಗೃಹಿಣಿ' ಎನಿಸಿದ ಹೆಣ್ಣು ಪಾತ್ರವು ಇರಬೇಕಾದ ಒಂದು 'ಆದರ್ಶ ಮಾದರಿ' ಇದ್ದರೆ, ಅದೇ ಹೆಣ್ಣು ಪಾತ್ರದ ಇನ್ನೊಂದು ಮಾದರಿಯನ್ನು 'ಅವ್ವ' ಕಾಣಿಸಿರುವಂತೆ ತೋರುತ್ತದೆ. 'ನನ್ನವ್ವ ಫಲವತ್ತಾದ ಕಪ್ಪು ನೆಲ, ಇಲ್ಲಿ ಹಸಿರು ಪತ್ರದ ಹರವು, ಬಿಳಿಯ ಹೂ ಹಬ್ಬ, ಸುಟ್ಟಷ್ಟು ಕಸುವು, ನೊಂದಷ್ಟೂ ಹೂ ಹಣ್ಣು' ಎಂದು ಮೊದಲಾಗುವ ಕವನವು ಉದ್ದಕ್ಕೂ ಹೆಣ್ಣಿನ 'ಜೀವಮುಖೀ' ಧೋರಣೆಯನ್ನು ಮೆಚ್ಚಿ ಸಂಭ್ರಮಿಸುತ್ತಿದೆ ಎಂಬಂತೆ ತೋರುತ್ತದೆ. ಹೆಣ್ಣಿಗೆ ಸಮಾಜದಲ್ಲಿ ವಾಸ್ತವವಾಗಿ ಸಲ್ಲದೆಯೇ ಹೋದ ಸಕಲ ಸಮ್ಮಾನಗಳನ್ನೂ ಕವನವು ಸಲ್ಲಿಸುತ್ತದೆ. ಹೆಣ್ಣನ್ನು ದೈವತ್ವಕ್ಕೆ ಏರಿಸದೆ, ಅಧೀನದವಳೆಂದು ಕಡೆಗಣಿಸದೆ, ಮಣ್ಣಿಗೆ ಸಮೀಪವಾಗಿ ಇರಿಸಿ ಗೌರವದಿಂದ ಕಂಡಿದೆ. ದುಡಿಯುವುದರಲ್ಲಿ, ನಡೆನುಡಿ, ವರ್ತನೆಗಳಲ್ಲಿ ಕಾಣುವ ಅವಳ ಒರಟು ಸ್ವಭಾವವು ರೂಢಿಗತ ಹೆಣ್ಣು ಮಾದರಿಯನ್ನು ಒಡೆದಿರುವಂತೆ ಕೂಡಾ ಕಾಣಿಸುತ್ತದೆ.

ಆದರೆ ಕುವೆಂಪು ಅವರ 'ಮನೆಮನೆಯ ತಪಸ್ವಿನಿ'ಯ ಬಗ್ಗೆ ಇರುವ ಪಿತೃಪ್ರಧಾನ ನಿರೀಕ್ಷೆಗಳೇ ಲಂಕೇಶರ 'ಅವ್ವ'ನ ಬಗ್ಗೆಯೂ ಇರುವುದು ಎಂಬುದನ್ನು ಗಮನಿಸಬಬಹುದು. ಇಲ್ಲಿರುವುದು ಕೂಡಾ ಅದೇ 'ಗಂಡುನೋಟ'ಕ್ಕೆ ಸಿಲುಕಿರುವ ಹೆಣ್ಣು. ಅಲ್ಲಿನ 'ಗೃಹಿಣಿ'ಯು ಇಲ್ಲಿ 'ತಾಯಿ' ಆಗಿದ್ದಾಳೆ. ಅವಳದೂ ತಪಸ್ಸೇ. 'ಬನದ ಕರಡಿಯ ಹಾಗೆ' ಗಂಡ, ಮಕ್ಕಳು, ಮನೆಗಳನ್ನು ಸಂರಕ್ಷಿಸಿಕೊಳ್ಳಲು ಉಸಿರುಗಟ್ಟಿ ದುಡಿಯುವ ಹೆಣ್ಣು. ಅವಳ ಕಾರ್ಯಕ್ಷೇತ್ರವು ಹೊಸಿಲಿನಿಂದ ಆಚೆಗೂ ದಾಟಿ ವಿಸ್ತರಿಸಿದೆ ಎನಿಸಿದರೂ, ಅದು ಹೊಸಿಲಿನ ಒಳಗೆ ಅಡುಗೆ ಒಲೆಯ ಮುಂದಿನ ಕೆಲಸಗಳ ವಿಸ್ತರಣೆಯಷ್ಟೇ ಆಗಿದೆ. ಅವ್ವಳ ಬದುಕಿನ ಗುರಿ, ಆಸೆ, ಆಕಾಂಕ್ಷೆ ಯಾವುದೂ ಮೊದಲಿನ ಗಡಿಗಳನ್ನು ದಾಟಿಲ್ಲ. ಕಪ್ಪು ಫಲವತ್ತಾದ ನೆಲವೇ ಆದ 'ಅವ್ವ'ಳಿಗೆ, 'ಮನೆತನದ ಉದ್ಧಾರ ಸೂತ್ರವೇ' ಬದುಕಿನ ಗುರಿ, ಗಮ್ಯ, ಬದುಕುವ ಕ್ರಮ ಎಲ್ಲವೂ ಆಗಿದೆ.

ಸಮಾಜ, ಸಮುದಾಯ, ಕುಟುಂಬಗಳ ರಕ್ಷಣೆಯಲ್ಲಿ ಹೆಂಗಸು ಜೀವ ಸವೆಸುತ್ತಲೇ ಬಂದಿರುವುದರಿಂದ ಈ ವ್ಯವಸ್ಥೆಗಳು ಇನ್ನೂ ಸುಭದ್ರವಾಗಿ ನಿಂತಿವೆ. ಆದರೆ ಅವಳದು ಎಂಬ ಬದುಕು ಏನಾಯಿತು ಎಂಬುದನ್ನು 'ಮನೆಮನೆಯ ತಪಸ್ವಿನಿಯ' ಆದರ್ಶ ಚಿತ್ರವೂ ಚಿಂತಿಸುವುದಿಲ್ಲ, ವಾಸ್ತವದ ಮಣ್ಣಿಗಂಟಿದ 'ಅವ್ವ'ನ ಚಿತ್ರವೂ ಚಿಂತಿಸುವುದಿಲ್ಲ. ಇಂಥಾ ಕಾಲದ, ಇಂಥಾ ದೇಶದ ಸಾಹಿತಿಗಳು ಎಂದಲ್ಲ, ಕೊನೆಗೆ ಪುರುಷರು ಮಹಿಳೆಯರು ಎಂಬ ಭೇದವೂ ಇಲ್ಲ ಎನ್ನುವಂತೆ, ಸಾಹಿತ್ಯ ಪಠ್ಯಗಳಲ್ಲಿ ಸಾಮಾನ್ಯವೆನಿಸಿ ಕಾಣುವುದು ಹೆಣ್ಣಿನ ಈ ಸ್ಥಿರಮಾದರಿ ಪಾತ್ರಗಳ ಚಿತ್ರಣಗಳೇ. ಭಾಷೆ, ಶೈಲಿ, ವಿನ್ಯಾಸಗಳ ಕಾರಣವಾಗಿ ಕೆಲವೊಮ್ಮೆ ಭಿನ್ನ ಚಿತ್ರಣಗಳು ಕಂಡಂತೆ ಭಾಸವಾಗಬಹುದು. ಆದರೆ ಹೆಣ್ಣನ್ನು ಕರ್ತೃವಾಗಿಸಿ ನೋಡುವ ಚಿತ್ರಣವು ದೊರೆಯುವುದು ಕಷ್ಟ. ಅಂದರೆ, ಗಂಡಿನ ಪರಿಧಿಯಾಚೆಗೆ ತನ್ನದೇ ಗುರಿ, ಗಮ್ಯ, ಹಾಗೂ ಬದುಕುವ ಕ್ರಮಗಳನ್ನು ವ್ಯಾಖ್ಯಾನಿಸಿಕೊಳ್ಳುವ ಹೆಣ್ಣಿನ ಚಿತ್ರಣಗಳು ಕಾಣುವುದೇ ಇಲ್ಲ. ವಾಸ್ತವದ ಬದುಕಿನಲ್ಲಿ ಹಾಗೆ ತನ್ನನ್ನು ವ್ಯಾಖ್ಯಾನಿಸಿಕೊಳ್ಳುವ ಹೆಣ್ಣು ಇರಬಹುದು. ಆದರೆ ಅವಳ ಮುಂದೆಯೂ ಸಮಾಜವು ಮೊದಲಿಗೆ ಇಡುವ ಪ್ರಶ್ನೆ ಮದುವೆ, ಗಂಡ, ಮಕ್ಕಳು, ಮನೆ ಎಂಬವೇ ಆಗಿರುತ್ತವೆ. ಮಹಿಳೆಯರು ಏನನ್ನಾದರೂ ಸಾಧಿಸಿದ್ದಾರೆ ಎಂದರೆ ಅವರ ಸಾಧನೆಯ ಬಗ್ಗೆ ಮಾತಾಡುವ ಬದಲು ಮನೆತನದ ಉದ್ಧಾರದ ಸೂತ್ರವನ್ನು ಪಾಲಿಸಿರುವ ಬಗೆಗೆ ಸವಾಲುಗಳನ್ನು ಕೇಳಲಾಗುತ್ತದೆ. ಪ್ರೀತಿಯೋ, ದ್ವೇಷವೋ. ನಿರ್ಲಿಪ್ತಿಯೋ ಯಾವುದಾದರೂ ಸರಿಯೇ ಗಂಡುಲೋಕದ ಪರಿಧಿಯಾಚೆಗೆ ಸರಿಯಲು ಪಿತೃ ಪ್ರಧಾನತೆಯು ಹೆಣ್ಣಿಗೆ ಅವಕಾಶವನ್ನು ಕೊಡುವುದಿಲ್ಲ. ಅದೇ ಸಂಸ್ಕೃತಿಯ ಉತ್ಪನ್ನವೇ ಆದ ಸಾಹಿತ್ಯ ಪಠ್ಯಗಳು ಕೂಡಾ ಅಲ್ಲಿಂದಾಚೆಗೆ ಅವಳನ್ನು ಸರಿಯಗೊಡುವುದಿಲ್ಲ. ಹೆಣ್ಣನ್ನು ಆ ಗಂಡು ಪರಿಧಿಯಲ್ಲಿಯೇ ಗಂಡುನೋಟದ ಕಾವಲಿನಲ್ಲಿ ಉಳಿಸುತ್ತದೆ.

●